

ಜಾತಕ ಇತ್ಯಾದಿಗಳನ್ನು ಹಣವನ್ನೂ ಸಹಾ ಹಾಸಿಗೆಯ ಅಡಿ ಇಡುತ್ತಿದ್ದರು. ಅಪ್ಪಯ್ಯನ ಹಾಸಿಗೆಯಡಿ ಏನಿದೆ, ಫೋಟೊ ಜಾತಕಗಳೇನಾದರೂ ಇವೆಯಾ ಎಂದು ಮ್ಯಾಟ್ರಿಮೊನಿಯಲ್ ತಲಾಶೆ ಮಾಡುತ್ತಿದ್ದೆ. ನಮ್ಮದೇನಾದರೂ ಹಾಡು ಬರೆದ ಹಾಳೆ ಅಥವಾ ಬಂದ ಪತ್ರಗಳನ್ನು ತುರ್ತಿಗೆಂದು ಅಲ್ಲಿಯೇ ಇಡುವುದೂ ಇತ್ತು. ನನ್ನ ಮದುವೆಯಾದ ನಂತರವೂ ಊರಿಗೆ ಹೋದಾಗ ಹಾಸಿಗೆಯಡಿ ಏನು ವಿಶೇಷವಿದೆ ಎಂದು ನೋಡುತ್ತಿದ್ದೆ.

ಮೊಮ್ಮಕ್ಕಳು ಸಹಾ ಅಜ್ಜನ ಹಾಸಿಗೆ ಮಂಚದಡಿಯಲ್ಲಿ ಅದೇನೇನು ಅಡಗಿಸಿಡುತ್ತಿದ್ದರೋ! ಕೆಲವೊಮ್ಮೆ ಇರುವೆಗಳು ಬಂದು ಮುತ್ತಿದಾಗಲೇ ಅಜ್ಜನಿಗೆ ಗೊತ್ತಾಗುವುದು. ಶೇಷ ತಲ್ಪ ಸುಖ ನಿದ್ರಿತ ರಾಮ ಕೇಳಿದ್ದೀರಲ್ಲವೇ ಈ ಸಾಲನ್ನು, ಆ ಮಹಾ ವಿಷ್ಣು ಮನಸ್ಸು ಮಾಡಿದ್ದರೆ ಎಂತೆಂತಹಾ ತಡಿಗಳು ಸಿಗುತ್ತಿದ್ದವೋ ಆದರೆ ಅವನು ಮಲಗಿದ್ದು ಯಾವುದರ ಮೇಲೆ!

ಕೆಲವರಿಗೆ ರಾತ್ರಿ ಹಾಸಿಗೆ ಕಂಡರೆ ಸಾಕು, ಮತ್ತೆ ಕೆಲವರಿಗೆ ನೀವು ಎಂತಹ ಹಂಸತೂಲಿಕಾ ತಲ್ಪವನ್ನೇ ತಂದಿರಿಸಿ, ಅವರಿಗೆ ನಿದ್ದೆ ಬರಲೊಲ್ಲದು, ಹಳೆಯ ದಿಂಬು ಹಾಸಿಗೆಯೇ ಆಗಬೇಕು! ನಮ್ಮಲ್ಲಿ ಕೆಲವು ಹಿರಿಯರು ಮೈ ಕೈ ನೋವಿಗೆ ವಾತಕಸ ಎಂದು ಕರೆದು ಅದರ ಉಪಶಮನಕ್ಕೊಂದು ತಾತ್ಕಾಲಿಕ ಪರಿಹಾರವನ್ನೂ ಕಂಡುಕೊಂಡಿದ್ದರು. ಅದೇನೆಂದರೆ ತಡಿಯಮೇಲೊಂದು ಕಂಬಳಿ ಹಾಸಿ ಮಲಗುವುದು. ಈಗೋಳ್ಳೆ ಪಣಾ, ವಾಗ್ತೆ ಎನ್ನುವಾಗ ಆ ಪಣವು ಎಂಬ ಪದ ತಡಿಯ ಮೇಲೆ ಹಾಸಿದ ಕಂಬಳಿಗೆ ಸಂದ ಅಗ್ಗಳಿಕೆಯಾಗಿರುತಿತ್ತೇನೋ!

ಎಲ್ಲೇ ಆಗಲೀ ಹುದುಗಿ ಹೋದರೆ ಮತ್ತೆ ಏಳುವುದೇ ಕಷ್ಟ, ಅದರಲ್ಲೂ ಹಾಸಿಗೆಯಿಂದ ನನ್ನಂತಹ ಮೈಯೇ